# ರವೀಂದ್ರನಾಥ ಠಾಕೂರರ ನಾಟಕಗಳಲ್ಲಿ ಅಸ್ಪೃಶ್ಯತೆಯನ್ನು ದಾಟುವ ದಾರಿ

**ಶಮಂತಕುಮಾರ ಕೆ.ಎಸ್.***

**DOI: https://doi.org/10.5281/zenodo.22106795**

**ABSTRACT**

ಠಾಕೂರರ ನಾಟಕಗಳಲ್ಲಿ ಜಾತಿಯ ಪೆಡಂಭೂತ ಮನುಷ್ಯನ ಬೆಳವಣಿಗೆಯನ್ನು ಕುಂಠಿಸುತ್ತದೆ ಎಂದು ಅವರು ಪ್ರತಿಪಾದಿಸುತ್ತಾರೆ. ಅಸ್ಪೃಶ್ಯತೆ ಮಾನವಸಮಾಜಕ್ಕೆ ಅಂಟಿದ ದೊಡ್ಡ ರೋಗವೆಂದು, ಅದನ್ನು ಹೋಗಲಾಡಿಸದೆ ವಿಶ್ವಮಾನವರಾಗಲು ಸಾಧ್ಯವಿಲ್ಲವೆಂದು ಅವರು ನಂಬಿದ್ದರು. ಅವರ ಸಾಹಿತ್ಯದಲ್ಲಿ ಅದರಲ್ಲೂ ನಾಟಕಗಳಲ್ಲಿ ಈ ಅಂಶ ಪ್ರಬಲವಾಗಿರುವುದನ್ನು ಗುರುತಿಸಬಹುದು. ಅಸ್ಪೃಶ್ಯತೆಗಿಂತ ಕ್ರೂರವಾದುದು ಬಣ್ಣದಿಂದ ವ್ಯಕ್ತಿಯನ್ನು ಅಳೆಯುವುದು. ವರ್ಣವ್ಯವಸ್ಥೆ ಮನುಷ್ಯ ನಿರ್ಮಾಣದಲ್ಲಿ ಪ್ರಕೃತಿ ದತ್ತವಾದುದು ಎಂಬುದನ್ನು ಅರಿಯದ ಕೆಲವು ವ್ಯಕ್ತಿಗಳು ಮನುಷ್ಯರನ್ನು ಪ್ರಾಣಿಗಿಂತ ಕೀಳಾಗಿ ನೋಡುತ್ತಿದ್ದರು. ಗಾಂಧೀಜಿಯವರನ್ನು ಮೊದಲು ಕಾಡಿದ್ದೇ ವರ್ಣವ್ಯವಸ್ಥೆಯ ಕ್ರೂರಪದ್ಧತಿಯ ಕರಾಳಮುಖ. ಈ ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದ ದಾರ್ಶನಿಕ ವ್ಯಕ್ತಿತ್ವದ ಠಾಕೂರರು ಗಾಂಧೀಜಿಯವರಂತೆ ಇಂತಹ ವ್ಯವಸ್ಥೆಯನ್ನು ಖಂಡಿಸುವ ನಿಟ್ಟಿನಲ್ಲಿ ತಮ್ಮ ಬರವಣಿಗೆಯನ್ನು ಮುಂದುವರಿಸಿದರು. ಅದರ ಫಲವಾಗಿಯೇ ಕೆಲವು ನಾಟಕಗಳು ಬಂದವು.

ರಾಜಕೀಯ ಸಮಸ್ಯೆ ಭಾರತದ ನಿಜವಾದ ಸಮಸ್ಯೆಯಲ್ಲ ಎಂದು ಅರಿತ ಠಾಕೂರರು ಸಾಮಾಜಿಕವಾದ ಜಾತಿಯ ಸಮಸ್ಯೆಯು ಭಾರತದ ನಿಜವಾದ ಸಮಸ್ಯೆ ಎಂದು ತಿಳಿದು ನಾಟಕಗಳು ಜಾತಿ, ಅಸ್ಪೃಶ್ಯತೆಯಂತಹ ಸಮಸ್ಯೆಗಳನ್ನು ತಮ್ಮ ಬಹುತೇಕ ನಾಟಕದ ವಸ್ತುವನ್ನಾಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಅಸ್ಪೃಶ್ಯತೆ ಜಾತಿವ್ಯವಸ್ಥೆ ಸೃಷ್ಟಿಸಿದ ಮತ್ತೊಂದು ಸಾಮಾಜಿಕ ಸಮಸ್ಯೆ. ಠಾಕೂರರು ನಾಟಕಗಳಲ್ಲಿ ಈ ಸಮಸ್ಯೆಗೆ ಸ್ಪಂದಿಸುವ ರೀತಿ ಬೆರಗು ಮೂಡಿಸುತ್ತದೆ. ವೈದಿಕಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಹೊತ್ತಿನಲ್ಲಿ ಠಾಕೂರರು ಅನೇಕ ಪಾತ್ರಗಳ ಮೂಲಕ ಅಸ್ಪೃಶ್ಯತೆ ಆಚರಣೆಯನ್ನು ಧೈರ್ಯವಾಗಿ ಪ್ರಶ್ನಿಸುತ್ತಾರೆ.

**KEYWORDS:** ಠಾಕೂರರ ನಾಟಕಗಳು, ಅಸ್ಪೃಶ್ಯತೆ, ವಿಸರ್ಜನಾ, ಚಾಂಡಾಲಿಕಾ, ಸಮನ್ವಯತೆ

* **ಡಾ. ಶಮಂತಕುಮಾರ ಕೆ.ಎಸ್.,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಪದವಿ ಮಹಾವಿದ್ಯಾಲಯ, ಹಾವೇರಿ.

ರವೀಂದ್ರನಾಥ ಠಾಕೂರರು ತಮ್ಮ ಕಾಲಘಟ್ಟದಲ್ಲಿ ಚಾಲ್ತಿಯಲ್ಲಿದ್ದ ಜಾತಿ–ಅಸಮಾನತೆಯ ವಿರುದ್ಧವಾಗಿ ಪ್ರಬಲವಾಗಿ ಧ್ವನಿಯೆತ್ತಿದರು. ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಆಚರಣೆಯು ಭಾರತೀಯ ಸಮಾಜದ ಎರಡು ಗಂಭೀರ ಸ್ವರೂಪದ ಕಪ್ಪುಚುಕ್ಕೆಗಳೆಂದೇ ಖಚಿತವಾಗಿ ನಂಬಿದ್ದರು ಹಾಗೂ ಅದೇ ಅಭಿಪ್ರಾಯವನ್ನು ಸಾರ್ವಜನಿಕವಾಗಿ ವ್ಯಕ್ತಪಡಿಸಿದರು. ಜಾತಿವ್ಯವಸ್ಥೆಯು ಭಾರತದ ಸಮಾಜವನ್ನು ಒಂದು ಏಕರೂಪದ ಐಕ್ಯತೆಯಿಂದ ಕೂಡಿದ ಸಮುದಾಯವಾಗಿ ರೂಪುಗೊಳ್ಳಲು ಬಿಡಲಿಲ್ಲ. ಹೀಗಾಗಿ ಅದು ಅನೇಕ ಸಮಯಗಳಲ್ಲಿ ಭಾರತೀಯ ಸಮಾಜ ಹಲವಾರು ಅಪಮಾನಗಳ ಅನುಭವಿಸಿತು. ಬಹುತೇಕ ಲೇಖಕರ ಸಾಹಿತ್ಯಕೃತಿಗಳಲ್ಲಿ ಜಾತೀಯತೆಯನ್ನು ವಿರೋಧಿಸುವ, ಸಮಾಜದಿಂದ ಅಸಮಾನತೆಯನ್ನು ಬೇರು ಸಹಿತ ಕಿತ್ತೆಸೆಯುವ, ಬಂಡಾಯದ ಬರಹಗಳನ್ನು ಕಾಣಬಹುದು. ಧರ್ಮಾತೀತವಾಗಿ ಎಲ್ಲ ಧರ್ಮದ ಪಾತ್ರಗಳನ್ನು ಬಿತ್ತರಿಸುವ ಮೂಲಕ ಸರ್ವಧರ್ಮ ಸಮನ್ವಯತೆಯನ್ನು ಸಾರುವುದನ್ನು ಠಾಕೂರರ ಅನೇಕ ನಾಟಕ ಕೃತಿಗಳಲ್ಲಿ ಕಾಣಬಹುದು.

ಅಸ್ಪೃಶ್ಯತೆ ಭಾರತೀಯ ಸಮಾಜದ ಅತ್ಯಂತ ಕೆಳಮಟ್ಟದ ಆಚರಣೆಯಾಗಿದೆ. ಇದು ಭಾರತಕ್ಕೆ ಮಾತ್ರ ಸೀಮಿತವಲ್ಲ; ವಿಶ್ವದ ಅನೇಕ ರಾಷ್ಟ್ರಗಳು ಅಸ್ಪೃಶ್ಯತೆಯ ಸಮಸ್ಯೆಯನ್ನು ಎದುರಿಸುತ್ತಿವೆ. ಗಾಂಧೀಜಿ ಅವರು ಅಸ್ಪೃಶ್ಯತೆಯನ್ನು ಕುರಿತು “ಹಿಂದೂ ಸಮಾಜ–ಶರೀರವನ್ನು ಪೀಡಿಸುತ್ತಿರುವ ಕುಷ್ಠರೋಗದ ಹುಣ್ಣಿನಂತಿದೆ” ಎಂದಿದ್ದಾರೆ. ವರ್ಣವ್ಯವಸ್ಥೆಯ ಮುಂದುವರಿಕೆ ರೂಪವಾದ ಜಾತಿ ಸೃಜಿಸಿದ ಅತ್ಯಂತ ಭಯಾನಕವಾದ ವಿಕೃತರೂಪವೇ ಅಸ್ಪೃಶ್ಯತೆ. ಮೇಲ್ವರ್ಗದ ಜಾತಿಗಳು ರಾಜಕೀಯವಾದ ಪ್ರಭುತ್ವವನ್ನು ಸಾಧಿಸಲು ನಿರ್ದಿಷ್ಟ ಕೆಳಜಾತಿಗಳನ್ನು ಅಸ್ಪೃಶ್ಯತೆಯ ಹೆಸರಿನಲ್ಲಿ ಹೀನರು, ನೀಚರು ಎಂದು ಕರೆದು ಅವರು ಸ್ಪರ್ಶಕ್ಕೆ ಯೋಗ್ಯರಲ್ಲ ಎಂದು, ಅವರ ದೇಹ ಸ್ಪರ್ಶದಿಂದಲೇ ಮೈಲಿಗೆ ಹೊಂದಿ ಕಳಂಕ ಬರುವುದೆಂದು ಸಾಮಾಜಿಕವಾಗಿ ಅವರನ್ನು ಹೊರಗಿಡುವ ಪ್ರಯತ್ನ ನಡೆಯಿತು. ಜಾತಿ ಪರಿಕಲ್ಪನೆಯ ಅಸ್ಪೃಶ್ಯತೆಯ ಕುರಿತಾಗಿ ಅನೇಕ ಸಂಶೋಧನೆಗಳು, ಚರ್ಚೆಗಳು ನಡೆದಿವೆ. ಅಸ್ಪೃಶ್ಯತೆಯ ಹುಟ್ಟು ಇನ್ನೂ ಖಚಿತವಾಗಿಲ್ಲ. ಎರಡು ಸಾವಿರ ವರ್ಷಗಳಿಗಿಂತಲೂ ಪೂರ್ವದಲ್ಲಿ ಈ ಅಸ್ಪೃಶ್ಯತೆಯ ಆಚರಣೆ ನಡೆದುಕೊಂಡು ಬಂದಿದೆ ಎಂದು ವಿದ್ವಾಂಸರು ಊಹಿಸಿದ್ದಾರೆ. ಅಸ್ಪೃಶ್ಯತೆ ಪದ ಉಗಮಕ್ಕೆ ಸಂಬಂಧಿಸಿದಂತೆ ಮಾಂಡೂಕ್ಯ ಉಪನಿಷತ್ತಿನಲ್ಲಿ ‘ಚಂಡಾಲರು’ ಎನ್ನುವ ಪದ ಬಳಕೆ ಇದೆ. ‘ಚಂಡಾಲರು’ ಎಂದರೆ ‘ನಾಯಿ’ ಹಾಗೂ ‘ಹಂದಿಗಿಂತಲೂ ಕನಿಷ್ಠರು’ ಎಂಬ ಅರ್ಥವನ್ನು ಸೂಚಿಸುತ್ತದೆ.

ಸರ್ ರಾಬರ್ಟ್ ರಿಸ್ಲೆ ಮತ್ತು ಮಜುಂದಾರ್ ಅವರು ಇದಕ್ಕೆ ಕೆಲವು ಜನಾಂಗೀಯ ಕಾರಣಗಳನ್ನು ನೀಡಿದ್ದಾರೆ. ಆರ್ಯರು ಭಾರತವನ್ನು ಪ್ರವೇಶಿಸಿ, ಇಲ್ಲಿನ ಮೂಲನಿವಾಸಿಗಳನ್ನು ಅರೆನಾಗರಿಕರು ಎಂದು ಪರಿಗಣಿಸಿ ದಾಸರು ಅಥವಾ ದಸ್ಯುಗಳೆಂದು ಕರೆದರು ಎಂದು ಅಭಿಪ್ರಾಯಪಟ್ಟಿದ್ದಾರೆ.

ಹಾಗಾದರೆ ಅಸ್ಪೃಶ್ಯರು ಯಾರು? ಅಸ್ಪೃಶ್ಯ ಜಾತಿಗಳು ಯಾವುದು? ಎಂಬುದರ ಕುರಿತಾಗಿ ಸುದೀರ್ಘವಾದ ಚರ್ಚೆಗಳು ವಿಶ್ವದೆಲ್ಲೆಡೆ ನಡೆದುಬಂದಿದೆ. ಬಿ.ಆರ್.ಅಂಬೇಡ್ಕರ್ ಹೇಳುವಂತೆ “ಹೊರಗಿನಿಂದ ಬಂದವರು ಊರ ಹೊರಗಡೆ ನೆಲೆಸಿದರೊ ಅಥವಾ ಊರಿನೊಳಗೆ ವಾಸಿಸುತ್ತಿದ್ದ ಜನರನ್ನು ಕೆಲವಾರು ಕಾರಣಾಂತರಗಳಿಂದ ಊರ ಹೊರಗೆ ಅಟ್ಟಲಾಯಿತೊ ಎಂಬುದನ್ನು ವಿಮರ್ಶಿಸಿದರೆ ಅಸ್ಪೃಶ್ಯತೆ ಆರಂಭದ ಬಗ್ಗೆ ಮತ್ತು ಅಸ್ಪೃಶ್ಯರಾರೆಂಬ ಬಗ್ಗೆ ತಿಳಿದುಬರುವುದು”.

ಅಸ್ಪೃಶ್ಯತೆ ಹೆಸರಿನಲ್ಲಿ ತುಳಿತಕ್ಕೆ ಒಳಗಾಗಿರುವ ಸಮೂಹವನ್ನು ಬೇರೆ ಬೇರೆ ಹೆಸರುಗಳಲ್ಲಿ ಕರೆಯುತ್ತಾರೆ. ಮೊದಲ ಬಾರಿಗೆ ಇಂತಹ ಜನರನ್ನು ಗುಜರಾತಿನ ನರಸಿಂಹ ಮೆಹತ ಅವರು 'ದೇವರ ಮಕ್ಕಳು' ಎಂಬ ಅರ್ಥ ಬರುವಂತೆ 'ಹರಿಜನರು' ಎಂದು ಕರೆದರು. ಇದನ್ನು ಗಾಂಧೀಜಿ ಅವರು ಜನಪ್ರಿಯಗೊಳಿಸಿದರು. 'ದಲಿತ' ಎನ್ನುವ ಪದ ಈಗ ಅಸ್ತಿತ್ವದಲ್ಲಿ ಹೆಚ್ಚಾಗಿ ಕಾಣಬಹುದು.

ಠಾಕೂರರ ನಾಟಕಗಳಲ್ಲಿ ಇಂತಹ ಪಾತ್ರಗಳಿಗೇನೂ ಕಡಿಮೆಯಿಲ್ಲ. ಬಹುತೇಕವಾಗಿ ಜಾತಿಯ ಶೋಷಣೆಗೆ ಒಳಗಾದವರು ಜಾತೀಯತೆಯನ್ನು ಮೀರುವ ವ್ಯಕ್ತಿತ್ವವಾಗಿ ಬೆಳೆದುನಿಂತಿರುವುದನ್ನು ಅವರ ಕೆಲವು ನಾಟಕಗಳಲ್ಲಿ ಕಾಣಬಹುದು.

"ರತ್ನಾವಳಿ: (ಬಿಕ್ಕಳಿಸಿ ಅಳುತ್ತಾ) ಕ್ಷಮಿಸುವೆಯಾ?

(ಮಂಡಿಯೂರು ಕುಳಿತು, ಶ್ರೀಮತಿಯ ಪಾದ ಧೂಳಿಯನ್ನು ಹಣೆಗೆ ಹಚ್ಚಿಕೊಳ್ಳುತ್ತಾಳೆ. ಆನಂತರ ನಮಸ್ಕರಿಸುತ್ತಾಳೆ)

(ಅನನ್ಯ ಭಕ್ತಿಯಿಂದ)

ಬುದ್ಧಂ ಶರಣಂ ಗಚ್ಛಾಮಿ

ಧರ್ಮಂ ಶರಣಂ ಗಚ್ಛಾಮಿ

ಸಂಘಂ ಶರಣಂ ಗಚ್ಛಾಮಿ" (ನಾಟಕ-ನರ್ತಕಿಯ ಪೂಜೆ)

ರತ್ನಾವಳಿಯು 'ನರ್ತಕಿಯ ಪೂಜೆ' ನಾಟಕದ ಖಳನಾಯಕಿ. ನಾಯಕಿ ಶ್ರೀಮತಿ, ರಾಜಪುತ್ರಿ ರತ್ನಾವಳಿ ಅರಮನೆಯ ನರ್ತಕಿ ಜೊತೆಗೆ ಊಳಿಗದವಳು. ಈಕೆ ಬೌದ್ಧಧರ್ಮದ ಅನುಯಾಯಿಯಾಗಿದ್ದವಳು. ರಾಜಪುತ್ರಿ ರತ್ನಾವಳಿ ಶ್ರೀಮತಿಯ ನಡವಳಿಕೆ ಸಹಿಸದೆ ಹೇಗಾದರೂ ಮಾಡಿ ಇವಳನ್ನು ಹತ್ತಿಕ್ಕಬೇಕೆಂಬ ಮಹಾದಾಸೆ. ಮಗಧರಾಜ ಬಿಂಬಸಾರ ವೈದಿಕ ಪರಂಪರೆಯನ್ನು ಆಚರಿಸುತ್ತಾನೆ. ಅದರ ಪರಿಣಾಮವಾಗಿ ಅಶೋಕ ವನಕ್ಕೆ ಬಂದು, ಬುದ್ಧನ ಸ್ತೂಪವನ್ನು ಒಡೆದು ಉರುಳಿಸಿ, ಬೌದ್ಧ ಮಂತ್ರವನ್ನು ಪಠಿಸುವರಿಗೆ ಶಿರಚ್ಛೇದನವಾಗಬೇಕೆಂದು ಆಜ್ಞಾಪಿಸುತ್ತಾನೆ. ಇದೇ ಸರಿಯಾದ ಸಂದರ್ಭ ಎಂದು ಅರಿತ ರತ್ನಾವಳಿ, ಶ್ರೀಮತಿಗೆ ಸ್ತೂಪದ ಮೇಲೆ ಕುಣಿಯುವಂತೆ ರಾಣಿ ಲೋಕೇಶ್ವರಿಯಿಂದ ಆಜ್ಞೆ ಮಾಡಿಸುತ್ತಾಳೆ. ಶ್ರೀಮತಿಯಿಂದ ಸ್ತೂಪದ ಮೇಲೆ ನೃತ್ಯ ಮಾಡುವಾಗ ಬುದ್ಧನ ಮಂತ್ರವನ್ನು ಮನಸಾರೆ ಜಪಿಸುತ್ತಾಳೆ. ಆಗ ರತ್ನಾವಳಿ ರಾಜಭಟರಿಂದ ಶ್ರೀಮತಿಯ ಕುತ್ತಿಗೆಯನ್ನು ಕತ್ತರಿಸುತ್ತಾಳೆ. ಆಕೆ ಬುದ್ಧನಲ್ಲಿ ಲೀನಳಾದಾಗ ಆಕೆಯನ್ನು ತನ್ನ ತೊಡೆಯ ಮೇಲೆ ಇರಿಸಿಕೊಂಡು ದುಃಖಿಸುತ್ತಾಳೆ. ಲೋಕೇಶ್ವರಿಯ ದುಃಖವನ್ನು ಕಂಡ ರತ್ನಾವಳಿಗೆ ಶ್ರೀಮತಿಗೆ ನೀಡುತ್ತಿದ್ದ ಶೋಷಣೆ ಹಾಗೂ ದಬ್ಬಾಳಿಕೆಯನ್ನು ನೆನೆದು ನಾನೇ ಅವಳ ಸಾವಿಗೆ ಕಾರಣನಾದೆನಲ್ಲ ಎಂದು ದುಃಖಿಸಿ ಅವಳ ಸತ್ತ ದೇಹದ ಪಾದಗಳಿಗೆ ನಮಸ್ಕರಿಸುತ್ತಾಳೆ. ರಾಜಪುತ್ರಿ ರತ್ನಾವಳಿಗೆ ಶ್ರೀಮತಿಯನ್ನು ದ್ವೇಷಿಸುವುದಕ್ಕೆ ಪ್ರಮುಖ ಕಾರಣ ಆಕೆ ಊಳಿಗದವಳು ಎಂಬುದು. ಕೊನೆಗೆ ತನ್ನ ತಪ್ಪಿನ ಅರಿವಾಗಿ ರೋದಿಸುತ್ತಾಳೆ. ನರ್ತಕಿಯಾದ ಶ್ರೀಮತಿ ತನ್ನ ಸಾವಿನೊಂದಿಗೆ ರಾಜಪುತ್ರಿಯ ಕಣ್ತೆರೆಸುತ್ತಾಳೆ. ಬುದ್ಧನ ಅಹಿಂಸಾ ಚಿಂತನೆಯ ಮೂಲಕ ಅಸ್ಪೃಶ್ಯತೆಯನ್ನು ಮೀರಿ ನಿಲ್ಲುತ್ತಾಳೆ.

"ಜನ2: ರಾಜರು ಆ ಬಂಗಾರ ಶೆಟ್ಟರನ್ನು ಬರೋಕೆ ಹೇಳಿ ಕಳಿಸಿದ್ದಾರೆ. ಶೆಟ್ಟಿಗಳು ರಥ ಎಳೆದ್ರೆ ಅದು ಖಂಡಿತ ಮುಂದಕ್ಕೆ ಹೋಗೆ ಹೋಗುತ್ತೆ ಅಂತ ಅವರೆಲ್ಲರೂ

ತಿಳಿದುಕೊಂಡಿದ್ದಾರೆ.

ಸೈನಿಕ 2: ಹಾಗೆಲ್ಲಾ ಉಪಯೋಗವಿಲ್ಲದ ಸಿಟ್ಟು ಮಾಡಬೇಡಪ್ಪಾ ವೀರ! ನಾವು ಬಳಸೋ ಎಲ್ಲ ವಸ್ತುಗಳ ಹಿಂದೆ ಆ ಶೆಟ್ಟಿಯ ಕೈವಾಡ ಇದ್ದೇ ಇರುತ್ತೆ. ಆ ಕಾಮನ ಬಾಣವು ಶೆಟ್ಟಿ ಕೈತಾಗಿದ್ರೇನೇ ಮುಂದು ಹೋಗಿ ಎದೆಗೆ ನಾಟೋದು. ಅಷ್ಟಕ್ಕೂ ಆ ಬಾಣಗಳು ತಯಾರಾಗೋದು ಶೆಟ್ಟಿ ಮನೇಲೆ ತಾನೇ?'' (ನಾಟಕ–ರಥಯಾತ್ರೆ)

'ರಥಯಾತ್ರೆ' ನಾಟಕದಲ್ಲಿ ಬರುವ ಸೈನಿಕರ ಸಂಭಾಷಣೆ ಇದು ಪ್ರಭುತ್ವದ ಮಾತನ್ನು ಪ್ರತಿನಿಧಿಸುತ್ತದೆ. ಮಹಾಕಾಲ ರಥವನ್ನು ಮೇಲ್ವರ್ಗದ ರಾಜರು, ಪುರೋಹಿತರು, ಕ್ಷತ್ರಿಯರು ಎಳೆದರೂ ಮುಂದೆ ಬಾರದಿದ್ದಾಗ, ಬಂಗಾರದ ಕೆಲಸವನ್ನು ಮಾಡುವ ಶೆಟ್ಟಿಯನ್ನು ಕರೆಯಲು ನಿರ್ಧರಿಸುತ್ತಾರೆ. ಶೆಟ್ಟಿ ತನ್ನ ಬಂಗಾರದ ಹಗ್ಗದ ಮೂಲಕವಾಗಿಯೇ ರಥವನ್ನು ಮುಂದೆ ಚಲಿಸುವಂತೆ ಮಾಡಬಹುದು ಎಂಬುದು ಪುರೋಹಿತಶಾಹಿಗಳ ನಂಬಿಕೆ. ''ಆ ಕಾಮನ ಬಾಣವು ಶೆಟ್ಟಿ ಕೈ ತಾಗಿದ್ರೇನೇ ಮುಂದೆ ಹೋಗಿ ಎದೆಗೆ ನಾಟೋದು'' ಎನ್ನುವ ಮಾತು ಕುಹಕವೆನಿಸಿದರೂ ಮಧ್ಯಮ ವರ್ಗದವರು ಮನಸ್ಸು ಮಾಡಿದರೆ ಏನನ್ನೂ ಸಾಧಿಸಿಯಾರು ಎಂಬ ವಿಶ್ವಾಸ ವ್ಯಕ್ತವಾಗುತ್ತದೆ.

''ನಾಯಕ: ಮಂತ್ರಿಗಳೇ, ನಾವು ಅಪ್ಪನ ರಥ ನಡೆಸೋಕಂತ ಬಂದಿದ್ದೀವಿ.

ನಾಯಕ: ಇಷ್ಟು ದಿನ ಅಪ್ಪನ ರಥ ನಮ್ಮ ಮೇಲೆ ಹರಿದು, ನಾವು ಚಕ್ರದ ಕೆಳಗೆ ತುಳಸಿಕೊಂಡ್ವಿ ಆದರೆ ಈ ಸಲ ಮಾತ್ರ ಅಪ್ಪ ನಮ್ಮನ್ನು ಬಲಿ ಅಂತ ಸ್ವೀಕರಿಸಿಲ್ಲ.''

''ಮಂತ್ರಿ: ಅವರನ್ನು ತಡೆಯೋದಕ್ಕೆ ನಿಮ್ಮ ಯಾರ ಕೈಯಲ್ಲೂ ಸಾಧ್ಯವಿಲ್ಲ. ಹಾಗೊಮ್ಮೆ ನೀವು ವ್ಯರ್ಥ ಪ್ರಯತ್ನ ಪಟ್ಟಿದ್ದೇ ಆದರೆ ಆಗ ನೀವೇ ಚಕ್ರದ ಕೆಳಗೆ ಪ್ರಾಣ ತೆರಬೇಕಾಗ್ತದೆ ತಿಳ್ಕೊಳ್ಳಿ'' (ನಾಟಕ–ರಥಯಾತ್ರೆ)

ಠಾಕೂರರ 'ರಥಯಾತ್ರೆ' ನಾಟಕ ಅಸ್ಪೃಶ್ಯತೆಯ ವಿರುದ್ಧದ ಕಾಲನ ಯಾತ್ರೆಯಾಗಿದೆ. ಅಸ್ಪೃಶ್ಯತೆ ಎಂಬ ಜಾತಿ ವಿರುದ್ಧ ಠಾಕೂರರ ಸ್ಪಷ್ಟ ಚಿಂತನೆಗಳನ್ನು ಗಮನಿಸಬಹುದು. ಯಾರು ಮುಟ್ಟಿದರೂ ಸಹ ಕಿಂಚಿತ್ತೂ ಅಲುಗಾಡದ ಕಾಲನ ರಥವನ್ನು ದಲಿತರು ಎಳೆಯಲು ಮುನ್ನುಗ್ಗಿ ಬರುತ್ತಿದ್ದಾರೆ ಎನ್ನುವ ಮಾತು ಕಾಡ್ಗಿಚ್ಚಿನಂತೆ ಹರಡಿತು. ಇದನ್ನು ಕೇಳಿ ಕ್ರೋಧಗೊಂಡ ಪ್ರಭುತ್ವ, ಸೈನಿಕರ ಮುಖಾಂತರ ದಲಿತರ ಕೇರಿಗಳಿಗೆ ನುಗ್ಗಿ ಹೊಡೆಯಲೆತ್ನಿಸಿದರು. ಅದು ಸಾಧ್ಯವಾಗದಿದ್ದಾಗ ಇಡೀ ವ್ಯವಸ್ಥೆ ಕೈಕಟ್ಟಿ ಕೂರಬೇಕಾಯಿತು. ದಂಡು ದಂಡಾಗಿ ಬಂದ ದಲಿತ ಬಂಧುಗಳನ್ನು ಕಂಡು ಇಡೀ ಪುರೋಹಿತಶಾಹಿ ವ್ಯವಸ್ಥೆ ದಿಗ್ಭ್ರಮೆಗೆ ಒಳಗಾಗುತ್ತದೆ. ''ಇಷ್ಟು ವರ್ಷಗಳ ಕಾಲ ನಾವು ಅವನ ಚಕ್ರಕ್ಕೆ ಸಿಕ್ಕಿ ಬಲಿಯಾಗುತ್ತಿದ್ದೆವೋ, ಆದರೆ ಆ ಪರಮಾತ್ಮ ಈ ಬಾರಿ ನಮ್ಮನ್ನು ಬಲಿಯಾಗಿ ಸ್ವೀಕರಿಸಿಲ್ಲ'' ಎನ್ನುವುದು ತಲೆತಲಾಂತರದಿಂದ ಸಂಪ್ರದಾಯದ ಹೆಸರಿನಲ್ಲಿ ದಲಿತರನ್ನು ತುಳಿದು ಹೊಸಕಿ ಹಾಕಿದ, ನೋವುಂಡವರ ಮರುಕದ ಮಾತಾಗಿದೆ.

'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ಮಾತನ್ನು ಸರಿಯಾಗಿ ಅರ್ಥೈಸಿಕೊಂಡ ದಲಿತ ಪಡೆ ವ್ಯವಸ್ಥೆ ವಿರುದ್ಧ ತಿರುಗಿ ಬೀಳಬೇಕಾದ ಅನಿವಾರ್ಯತೆಯನ್ನು ಈ ನಾಟಕ ಸೃಷ್ಟಿಸಿದೆ. ಹಗ್ಗ ಮುಟ್ಟುತ್ತಿದ್ದಂತೆ ಮಹಾಕಾಲನ ರಥ ಚಲಿಸಲಾರಂಭಿಸುತ್ತದೆ. ಶೋಷಣೆ ಪ್ರತಿನಿಧಿಗಳಾದ ಸೈನಿಕ ಶೆಟ್ಟಿ ಕ್ಷತ್ರಿಯರು ರಾಜನ ಮನೆಗಳನ್ನು ಮುರಿದು ಮುನ್ನಡೆಯುತ್ತದೆ. ತಳಸಮುದಾಯದವರು ಜಾತಿ ಅಸ್ಪೃಶ್ಯತೆಯ ಸಂಕೋಲೆಯನ್ನು ಕಳಚಿ ಮುನ್ನೆಲೆಗೆ ಬಂದಾಗ ಅಸಾಧ್ಯವಾದದ್ದು ಸಾಧ್ಯವಾದೀತು ಎಂಬುದನ್ನು ಇಂತಹ ಊರ್ಧ್ವಮುಖಿ ಚಿಂತನೆಯ

ಆಶಯಗಳುಳ್ಳ ಠಾಕೂರರ ನಾಟಕಗಳಿಂದ ತಿಳಿಯಬಹುದಾಗಿದೆ.

“ವಾಸಂತಿ: ನಮ್ಮ ಅಪ್ಪ ಬದುಕಿದ್ದಾಗ ಜನರ ನಿಯಮಗಳನ್ನು ಮತ್ತೆ ಅವರ ದೇವರುಗಳನ್ನು ನಿರಾಕರಿಸಿದ್ದ, ಆತ ಅವರ ಆಚಾರಗಳನ್ನು ಅನುಸರಿಸಿರಲಿಲ್ಲ.” (ನಾಟಕ–ವಿಸರ್ಜನಾ)

ವಾಸಂತಿಯ ಈ ಮಾತು ವೈಚಾರಿಕತೆಯಿಂದ ಕೂಡಿದ್ದಾಗಿದೆ. ತನ್ನ ತಂದೆ ರಘು ಆ ಊರಿನಲ್ಲಿ ಅಸ್ಪೃಶ್ಯತೆಗೆ ಒಳಗಾದವನಾದರೂ ಆತ ಎಂದೂ ಜನರು ವಿಧಿಸಿದ್ದ ನಿಯಮಗಳಿಗೆ ಒಳಗಾಗದೆ ಅವುಗಳನ್ನು ನಿರಾಕರಿಸಿ ಬದುಕುತ್ತಿದ್ದ ಎಂಬುದನ್ನು ವಾಸಂತಿಯ ಮಾತುಗಳಲ್ಲಿ ಕಾಣಬಹುದು. ಆತ ಊರ ಜನರ ಆಚಾರ–ವಿಚಾರಗಳನ್ನು ಅನುಸರಿಸಿರಲಿಲ್ಲ. ದಬ್ಬಾಳಿಕೆಗೆ ಒಳಗಾದವನಿಗೆ ಇರಬೇಕಾದ ಪ್ರಜ್ಞೆ ಇದು. ಯಾವ ಕಾನೂನುಗಳು, ಯಾವ ನಿಯಮಗಳು, ವಿಚಾರಗಳು, ಆಚಾರಗಳು, ನಮ್ಮನ್ನು ಅಸ್ಪೃಶ್ಯತೆಗೆ ದೂಡಿರುತ್ತವೋ ಅವುಗಳಿಂದ ದೂರವೇ ಉಳಿದುಬಿಡುವುದು. ತಂದೆ ರಘುವಿನ ಇಂಥ ಗುಣಗಳು ವಾಸಂತಿಯಲ್ಲಿವೆ. ಆಕೆಯನ್ನು ಜನರು ಮುಟ್ಟಿಸಿಕೊಳ್ಳದೆ ದೂರ ನಿಲ್ಲಿಸಿದರೂ ಸಹ ಸನ್ಯಾಸಿಯ ಬಳಿ ಬಂದು ನಾನು ನಿಮ್ಮನ್ನು ಮುಟ್ಟಬಹುದೇ ಎಂದು ಪ್ರಶ್ನೆ ಕೇಳುವುದರಲ್ಲಿ ಜಾತೀಯತೆಯನ್ನು ಮೀರಿ ನಿಲ್ಲುವ ತವಕ ಆಕೆಯಲ್ಲಿದೆ ಎಂಬುದನ್ನು ಧ್ವನಿಸುತ್ತದೆ. ಜಾತೀಯತೆ ಹೋಗಲಾಡಿಸುವಲ್ಲಿ ಮುಕ್ತವಾಗಿ ಸನ್ಯಾಸಿಯು ಸಹ ವಾಸಂತಿಗೆ ಪ್ರತಿ ಸ್ಪಂದಿಸುತ್ತಾನೆ. ನೀನು ನನ್ನನ್ನು ಮುಟ್ಟಬಹುದು. ನಾನು ನಿನ್ನನ್ನು ಮುಟ್ಟುವೆ ಎನ್ನುವ ಮಾತು ಜಾತಿ, ಧರ್ಮ ಎಲ್ಲ ಸ್ತರಗಳನ್ನು ಮೀರುವ ವಿಶ್ವಮಾನ್ಯತೆಯ ತುಡಿತವೇ ಆಗಿದೆ. ಶೋಷಿಸಿಕೊಳ್ಳುವವರು ಇರುವವರೆಗೆ ಶೋಷಣೆ ಮಾಡುವ ವರ್ಗ ಇದ್ದೇ ಇರುತ್ತದೆ. ಒಮ್ಮೆ ವ್ಯವಸ್ಥೆ ವಿರುದ್ಧ ವೈಚಾರಿಕವಾಗಿ ತಿರುಗಿ ಬಿದ್ದಾಗ, ವ್ಯವಸ್ಥೆ ನಮ್ಮನ್ನು ಗೌರವಿಸಲಾರಂಭಿಸುತ್ತದೆ. ಪ್ರಶ್ನಿಸುವ ಮನೋಭಾವ ಎಲ್ಲಿಯವರೆಗೆ ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿಯ ತನಕ ವ್ಯವಸ್ಥೆ ನಿಂತ ನೀರಾಗಿರುತ್ತದೆ. ವೈಚಾರಿಕ ಮನೋಭಾವದ ಕಡೆಗೆ ನೊಂದವರ ನಡೆಯ ಅವಶ್ಯಕತೆಯನ್ನು ಠಾಕೂರರು ಸನ್ಯಾಸಿ ನಾಟಕದಲ್ಲಿ ನೇರವಾಗಿಯೇ ಹೇಳುತ್ತಾರೆ.

“ಅಪರ್ಣಾ: ಹಾಗಾದರೆ ಬಾ, ನನ್ನ ಜೊತೆ–ಈ ಮಂದಿರವನ್ನು ಬಿಟ್ಟು.

ಜೈಸಿಂಗ್: ಮಂದಿರವನ್ನು ಬಿಟ್ಟು ಎಂದೆಯಾ? ಹೌದು ನಾನದನ್ನು ಬಿಟ್ಟುಬರುತ್ತೇನೆ. ನಡಿ... ಅಯ್ಯೋ, ಅಪರ್ಣಾ ನಾನು ಬಿಟ್ಟು ಬರಬೇಕು. ಆದರೂ ಬಿಡಲಾರೆ. ಏಕೆಂದರೆ ನಾನಿನ್ನೂ ನನ್ನ ಕೊನೆಯ ಕರ್ತವ್ಯವನ್ನು ಮಾಡಬೇಕಿದೆ. ಆದರೆ ಅದು ಇರಲಿ ಬಿಡು. ಬಾ ಹತ್ತಿರ, ಇನ್ನೂ ಹತ್ತಿರ ಬಾ. ನನ್ನ ಕಿವಿಯಲ್ಲಿ ಏನಾದರೂ ಉಸುರು–ಸಾವನ್ನೇ ದಾಟಿ ಬರುವಂಥ ಯಾವುದಾದರೂ ಮಾಧುರ್ಯವನ್ನು.

ಅಪರ್ಣಾ: ಹೃದಯ ತುಂಬಿ ಬಂದಾಗಿನ ಮಾತುಗಳು” (ನಾಟಕ–ವಿಸರ್ಜನಾ)

‘ವಿಸರ್ಜನಾ’ ನಾಟಕದಲ್ಲಿ ಅಪರ್ಣಾ ಎಂಬ ಹೆಣ್ಣುಮಗಳು ಶೂದ್ರ ವರ್ಗಕ್ಕೆ ಸೇರಿದ ಭಿಕ್ಷುಕಿ. ಆಕೆ ಪುರೋಹಿತನ ಮಗನಾದ ಜೈ ಸಿಂಗ್‌ನನ್ನು ಪ್ರೀತಿಸುತ್ತಿರುತ್ತಾಳೆ. ಭಿಕ್ಷುಕಿಯನ್ನು ಮೊದಲ ಬಾರಿಗೆ ಕಂಡ ರಘುಪತಿ ಆಕೆಯನ್ನು ದೇವಾಲಯದ ಹೊರಾಂಗಣದಲ್ಲಿ ನಿಲ್ಲಿಸಿ ಛೀಮಾರಿ ಹಾಕಿ ಕಳಿಸಿಕೊಡುತ್ತಾನೆ. ಆದರೆ ಮಗ ಜೈ ಸಿಂಗ್ ಆಕೆಯನ್ನು ತನ್ನ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಸುತ್ತಾನೆ. ಜೈ ಸಿಂಗ್ ಜಾತಿ–ಮತಗಳ ಎಲ್ಲೆಯನ್ನು ಮೀರಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡಾತ. ತಾನು ಪುರೋಹಿತನಾದರೂ ಯಾವ ಮಡಿವಂತಿಕೆ ಇಲ್ಲದೆ ತನ್ನ ಬದುಕನ್ನು ಕಟ್ಟಿಕೊಂಡವನು. ಅಪರ್ಣಾಳು ಕೂಡ ತನ್ನ ಜಾತಿಯ ಪರಿಧಿಯನ್ನು ಮೀರಿ ಜೈ

ಸಿಂಗ್‌ನ ಬಳಿ ಸ್ನೇಹ ಮತ್ತು ಪ್ರೇಮವನ್ನು ಬೆಳೆಸುತ್ತಾಳೆ. ಜೈ ಸಿಂಗನಿಗೆ ತೊಂದರೆಯಾದಾಗ ನಾವು ಇಲ್ಲಿಂದ ಹೊರಟು ಹೋಗೋಣವೆನ್ನುವ ಆಕೆ, ಈ ಜಾತಿ, ಮಂದಿರ, ಇವುಗಳನ್ನೆಲ್ಲ ಬಿಟ್ಟು ಬಹುದೂರ ಹೋಗಿ ಶಾಂತಿಯುತವಾಗಿ ಇರುವ ಬದುಕನ್ನು ಬಯಸುತ್ತಾಳೆ. ನಾಟಕದ ಕೊನೆಯಲ್ಲಿ ರಘುಪತಿ ಜೈ ಸಿಂಗ್ ಮರಣ ಹೊಂದಿದಾಗ ಅಪರ್ಣಾಳನ್ನು ಕರೆಸಿ, ದೇವಾಲಯದ ಒಳಗೆ ಸತ್ತುಬಿದ್ದಿದ್ದ ತನ್ನ ಮಗನನ್ನು ಬದುಕಿಸಿಕೊಡು ಎಂದು ಅಪರ್ಣಾಳಲ್ಲಿ ಬೇಡುವುದನ್ನು ಕಂಡಾಗ ಜಾತಿ ಎಂಬುದು ಪ್ರೀತಿ ಮತ್ತು ಮಮತೆಯ ಮುಂದೆ ಬೂದಿಯಾಗುತ್ತದೆ. ಇದೇ ರಘುಪತಿ ಹಿಂದೆ ಅಪರ್ಣಾಳನ್ನು ಮಂದಿರದ ಒಳಗೆ ಬಿಡದೆ ಅವಮಾನಿಸಿದ್ದ. ತನ್ನ ಕರುಳ ಬಳ್ಳಿ ಅದೇ ಮಂದಿರದಲ್ಲಿ ಸತ್ತು ಬಿದ್ದಾಗ ಅಪರ್ಣಾಳನ್ನು ಬದುಕಿಸಿ ಕೊಡುವಂತೆ ಬೇಡುತ್ತಾನೆ. ಕಾಲ ನಿಂತ ನೀರಲ್ಲ. ನೋವು, ಸಂಕಟಗಳು ತಮ್ಮ ಬುಡಕ್ಕೆ ಬಂದಾಗ ಯಾವ ವ್ಯಕ್ತಿಯಾದರೂ ತನ್ನ ನಡವಳಿಕೆಯಲ್ಲಿ ಬದಲಾಗಲೇಬೇಕಾಗುತ್ತದೆ. ಇದಕ್ಕೆ ರಘುಪತಿ ಪಾತ್ರವೇ ಸಾಕ್ಷಿ.

"ಪ್ರಕೃತಿ: ಅಲ್ಲ ಅಮ್ಮಾ, ಇಡೀ ಶ್ರಾವಸ್ತಿ ನಗರದಲ್ಲಿ ಎಲ್ಲೂ ನೀರು ಇದ್ದಿಲ್ಲವೇ? ಎಲ್ಲಾ ಬಿಟ್ಟು ಈ ಬಾವಿಗೇ ಅವನು ಯಾಕೆ ಬರಬೇಕಿತ್ತು? ನಾನು ನಿಜವಾಗಿಯೂ ಇದನ್ನು ನನ್ನ ಪೂರ್ವಜನ್ಮವೆಂದೇ ಕರೆಯಬಹುದು. ಮನುಷ್ಯನ ತೃಷೆಯನ್ನಡಗಿಸುವ ಕೀರ್ತಿಯನ್ನು ನನಗೆ ನೀಡಲು ಆತ ಬಂದಿದ್ದ. ಆತ ಬಯಸಿದ ಪುಣ್ಯಕಾರ್ಯ ಅದುವೇ ಇರಬೇಕು. ತನ್ನ ವಚನ ಪಾಲನೆಗಾಗಿಯೇ ಆತನಿಗೆ ಬೇರೆಲ್ಲೂ ಆ ನೀರು ಸಿಗುವಂತಿರಲಿಲ್ಲ ಎನಿಸುತ್ತದೆ. ಹೌದು, ಯಾವ ಪವಿತ್ರ ನದಿಯೂ ಇಲ್ಲ. ಜಾನಕಿಯು ತನ್ನ ವನವಾಸದ ಪ್ರಾರಂಭದಲ್ಲಿ ಇಂಥದ್ದೇ ನೀರಿನಲ್ಲಿ ಸ್ನಾನ ಮಾಡಿದ್ದಳು ಮತ್ತು ಅವಳಿಗಾಗಿ ಆ ನೀರನ್ನು ಚಾಂಡಾಲನಾದ ಗುಹಾಕನು ಸೇದಿಕೊಟ್ಟಿದ್ದ ಎಂದು ಅವನು ಹೇಳಿದ. ಆ ಮಾತನ್ನು ಕೇಳಿದಾಗಲಿಂದ ನನ್ನ ಹೃದಯ ನಲಿಯುತ್ತಿದೆ ಹಗಲೂ ರಾತ್ರಿ ನನಗೆ ಗಂಭೀರವಾಣಿ ಕೇಳಿಸುತ್ತದೆ..." ನನಗೆ ನೀರು ಕೊಡು ನನಗೆ ನೀರು ಕೊಡು" (ನಾಟಕ–ಚಾಂಡಾಲಿಕಾ)

ಬಣ್ಣವಿಲ್ಲದ, ರುಚಿಯಿಲ್ಲದ, ಆಕಾರವಿಲ್ಲದ ನೀರಿನಂತಾಗಬೇಕು ವ್ಯಕ್ತಿತ್ವ ಎನ್ನುತ್ತಿವೆ. ಮೇಲಿನ ನುಡಿಗಳಲ್ಲಿ ಠಾಕೂರರ ದಲಿತರ ಪರ ಚಿಂತನೆಯ ಪವಿತ್ರ ತೀರ್ಥವಿದು. ರವೀಂದ್ರನಾಥ ಠಾಕೂರ್ ಅವರಲ್ಲಿ ಬಹಳ ಚರ್ಚಿತ ನಾಟಕಗಳಲ್ಲಿ ಚಾಂಡಾಲಿಕಾವು ಒಂದು. ಚಾಂಡಾಲಿಕ ಎನ್ನುವುದು ಜಾತಿವಾಚಕ ಪದವಾಗಿದೆ. ಚಾಂಡಾಲಿಕ ಕನ್ಯೆ ಪ್ರಕೃತಿ ಬೌದ್ಧಸನ್ಯಾಸಿ ಆನಂದನ ಜಾತ್ಯತೀತ ಮನೋಭಾವವನ್ನು ಕಂಡು ಆತನಿಗೆ ಸೋತು ಶರಣಾಗುತ್ತಾಳೆ. ತನ್ನ ಜಾತಿಯ ಬಗ್ಗೆ ತಿಳಿದಿದ್ದರೂ ಸಹ ಆನಂದ ಆಕೆಯ ಬಳಿ ಬಂದು ನೀರು ಕುಡಿದದ್ದು, ಪ್ರಕೃತಿಗೆ ಅವನ ಕುರಿತಾಗಿ ಅಭಿಮಾನ ಮೂಡುತ್ತದೆ. ಆನಂದ ಎಲ್ಲಿಯೂ ನೀರನ್ನು ಕುಡಿಯದೆ, ಇಲ್ಲಿಗೆ ಬಂದು ನೀರನ್ನು ಕುಡಿಯುತ್ತಾನೆಂದರೆ ಇದು ನಿಜವಾಗಿಯೂ ಪುಣ್ಯ ಕಾರ್ಯ. ನಮ್ಮ ಪೂರ್ವಜನ್ಮದ ಫಲವೂ ಹೌದು ಎಂದು ತಾಯಿಗೆ ಹೇಳುತ್ತಾಳೆ. ಹರಿಯುವ ನೀರು, ಸುಳಿದಾಡುವ ಗಾಳಿ, ಸುಡುವ ಬೆಂಕಿಗೆ ಯಾವ ಜಾತಿ ಕುಲದ ಹಂಗಿಲ್ಲ. ಮನುಷ್ಯ ತನ್ನ ಸ್ವಾರ್ಥ ಲಾಲಸೆಗೆ ಸಮಾಜದಲ್ಲಿ ಜಾತಿಯ ಗೋಡೆಗಳನ್ನು ಕಟ್ಟಿದ್ದಾನೆ. ಆನಂದನಂತಹ ವ್ಯಕ್ತಿ ಸಮಾಜದಲ್ಲಿ ಇಂತಹ ಗೋಡೆಗಳನ್ನು ಮುರಿಯಬಹುದು. ಪ್ರಕೃತಿಯಂತವರು ಮಾನಸಿಕವಾಗಿ ಮುನ್ನುಗ್ಗಲು ಸಿದ್ಧರಾಗಿರಬೇಕು.

"ಪ್ರಕೃತಿ: ಛೇ ಛೇ! ಅಮ್ಮ ನಾನು ನಿನಗೆ ಪುನಃ ಹೇಳುತ್ತೇನೆ–ನಿನ್ನನ್ನು ನೀನೇ ಕೀಳಾಗಿ ಕಾಣುವುದು ನಿನಗೆ ನೀನೆ ಮಾಡಿಕೊಳ್ಳುವ ವಂಚನೆ ಬೇಡ ಅದು ಸುಳ್ಳು ಮತ್ತು ಪಾಪ". (ನಾಟಕ–ಚಾಂಡಾಲಿಕಾ)

ಆನಂದನ ದರ್ಶನವಾದ ನಂತರ ಪ್ರಕೃತಿ ಸಂಪೂರ್ಣವಾಗಿ ಜಾತಿ–ಅಸ್ಪೃಶ್ಯತೆಯ ವಿರುದ್ಧ ಸಿಡಿದೇಳುತ್ತಾಳೆ. ತನ್ನ ಜಾತಿಯ ಪರಿಧಿಯನ್ನು ಮರೆತು ಪ್ರೇಮದಿಂದ ಕಂಡ ಆನಂದನಿಗೆ ಸೋತ ಪ್ರಕೃತಿ, ತನ್ನ ಜಾತಿಯ ಮಿತಿಯ ಕುರಿತಾಗಿ ಸದಾ ಬುದ್ಧಿ ಹೇಳುವ ತಾಯಿಗೆ ಆ ಸಂಕೋಲೆಯಿಂದ ಹೊರಬರಬೇಕಾದ ಅನಿವಾರ್ಯತೆಯನ್ನು ತಿಳಿಸಿಕೊಡುತ್ತಾಳೆ. ಠಾಕೂರ್ ಅವರೇ ಇಲ್ಲಿ ಪಾತ್ರವಾಗಿ ಸಮಾನತೆಯ ಅರಿವಿನ ಬೆಳಕನ್ನು ಜಗದಗಲ ಬೆಳಗುತ್ತಿದ್ದಾರೋ ಅನ್ನುವ ಹಾಗೆ ಪಾತ್ರಗಳನ್ನು ಸೃಷ್ಟಿಸಿದ್ದಾರೆ.

“ಮಾಲಿನಿ: ಲೋಗರರಿತಿಹರದನು. ನಿನ್ನ ಪಿತ ಕಕ್ಕನಿಂ ವಂಚಿತನು ತಾನಾಗಿ ಪಿತೃಧನಕೆ ಎರವಾಗಿ ಅಂದೆ ಕೋಪದಿ ಬಿಟ್ಟ ಮನೆ ಮಠವ ತನ್ನೆಲ್ಲ ಧನ ಕನಕ–ಸಂಪದವ, ಸರ್ವಸ್ವವನ್ನೆಲ್ಲ. ಪರಿಶುದ್ಧ ಮನದಿಂದೆ ತ್ಯಜಿಸಿದನು ಅವನಂದೆ! ಬಡ ಕುಟೀರಕೆ ತಂದ, ದೇವ ಮೂರ್ತಿಯನೊಂದ, ಅವನ ಆ ಧರ್ಮಕ್ಕೆ ಮಣಿದಿರುವೆ ಓ ಮಾತೆ! ನಿನ್ನ ವರ ದಾರಿದ್ರ್ಯ ಧನವೆನ್ನ ಎದೆಯಲ್ಲಿ ಕೂಡಿಡಲು ನೀನೆನಗೆ ಅವಕಾಶ ನೀಡಮ್ಮ! ನನ್ನ ಪಿತನೈಶ್ವರ್ಯ ರಾಜಪುತ್ರನಿಗಿರಲಿ”. (ನಾಟಕ–ಮಾಲಿನಿ)

ರಾಜಪುತ್ರಿ ಮಾಲಿನಿ ಸಂಪೂರ್ಣವಾಗಿ ಬೌದ್ಧಧರ್ಮವನ್ನು ಒಪ್ಪಿಕೊಂಡಿರುವ ಪಾತ್ರ. ತನ್ನ ಅರಮನೆಯ ಸಕಲ ಐಶ್ವರ್ಯ, ಶ್ರೀಮಂತಿಕೆಯ ಬಂಧನದಿಂದ ವಿಮುಖಳಾಗಿ, ಜನಸಾಮಾನ್ಯರಡೆಗೆ ಹೋಗಿ ಸಾಮಾನ್ಯರಂತೆ ಬದುಕುವ ತುಡಿತ ಆಕೆಗೆ. ಸಾಮ್ರಾಜ್ಯದಲ್ಲಿ ವೈದಿಕ ಧರ್ಮವಿದ್ದರೂ ಅದರ ಅರ್ಥಹೀನ ಆಚರಣೆಯ ವಿರುದ್ಧವಾಗಿ, ಆಗ ತಾನೇ ಹುಟ್ಟಿಕೊಂಡಿದ್ದ ಹೊಸ ಧರ್ಮವಾದ ಬೌದ್ಧಧರ್ಮದ ಅಹಿಂಸಾ ತತ್ವಕ್ಕೆ ಮಾರುಹೋಗುತ್ತಾಳೆ. ತನ್ನ ತಂದೆ ಮತ್ತು ತಾಯಿಯ ಬಳಿ ಬಂದು ಮಾಲಿನಿ ನನಗೆ ಈ ಅರಮನೆ ಧನಕನಕ ಸಂಪತ್ತು ಇವು ಏನೂ ಬೇಡ, ನನಗೆ ಮುಕ್ತಿ ಬೇಕು, ನನಗೆ ಜನ ಸಾಮಾನ್ಯರೊಂದಿಗೆ ಬದುಕುವ ನಿಸ್ವಾರ್ಥ ಬದುಕು ಬೇಕು ಎಂದು ತನ್ನ ತಾಯಿಯಲ್ಲಿ ಪರಿಪರಿಯಾಗಿ ಕೇಳಿಕೊಂಡು, ಸಾಮ್ರಾಜ್ಯದ ಸಂಪತ್ತೆಲ್ಲ ರಾಜಪುತ್ರನಿಗೆ ಇರಲಿ ನನ್ನನ್ನು ಆಶೀರ್ವದಿಸಿ ಇಲ್ಲಿಂದ ಹೊರಡುವುದಕ್ಕೆ ಅಪ್ಪಣೆ ನೀಡಿ ಎಂದು ಕೇಳಿಕೊಳ್ಳುತ್ತಾಳೆ. ತಂದೆ ಮತ್ತು ತಾಯಿ ಮಾಲಿನಿಗೆ ಎಷ್ಟೇ ಬುದ್ಧಿವಾದ ಹೇಳಿದರೂ ಆಕೆಯ ನಿರ್ಧಾರ ಸ್ವಲ್ಪವೂ ಬದಲಾಗುವುದಿಲ್ಲ. ಬ್ರಾಹ್ಮಣರು ನಮ್ಮ ಆರ್ಯಸಮಾಜವನ್ನು ಹಾಳುಮಾಡುತ್ತಾಳೆಂದು ಭಾವಿಸಿ ಆಕೆಯನ್ನು ದೇಶದಿಂದ ಹೊರಹಾಕಬೇಕೆಂದು ರಾಜನಲ್ಲಿ ಬಂದು ವಿಜ್ಞಾಪಿಸಿಕೊಳ್ಳುತ್ತಾರೆ. ಇದೆಲ್ಲಕ್ಕೂ ತಲೆ ಕೆಡಿಸಿಕೊಳ್ಳದ ಮಾಲಿನಿ ವೈದಿಕ ಧರ್ಮವನ್ನು ಧಿಕ್ಕರಿಸಿ, ದೇಶ ತ್ಯಾಗ ಮಾಡುತ್ತಾಳೆ. ಪರಂಪರಾನುಗತವಾಗಿ ಬಂದಿರುವ ಒಂದು ಧರ್ಮದ ಅಧರ್ಮವನ್ನು ಧಿಕ್ಕರಿಸಿ, ಎಲ್ಲರನ್ನೂ ಸಮವಾಗಿ ಕಾಣುವ ಬೌದ್ಧಧರ್ಮಕ್ಕೆ ಮನ್ನಣೆ ನೀಡುತ್ತಾಳೆ.

ಜಾತಿಪದ್ಧತಿಯ ಮುಂದುವರಿದ ರೂಪ ಅಸ್ಪೃಶ್ಯತೆಯ ಕುರಿತಾಗಿ ಠಾಕೂರ ನಾಟಕಗಳು ಪ್ರತಿಸ್ಪಂದಿಸುವ ರೀತಿ ಬಹಳ ಮೆಚ್ಚುವಂತದ್ದು. 1930ರ ದಶಕದಲ್ಲಿ ಠಾಕೂರರು ಗಾಂಧೀಜಿಯವರೊಡನೆ ಸೇರಿ ಹರಿಜನರ ಪರವಾದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅಲ್ಲದೆ ಗಾಂಧೀಜಿಯವರ ಕೋರಿಕೆಯ ಮೇರೆಗೆ ‘ದಿ ಸೆಕ್ರೆಡ್ ಟಚ್’ ಎಂಬ ಕವಿತೆಯನ್ನು ರಚಿಸಿದ್ದರು. ಈ ಕವಿತೆ ಮಾನವತಾವಾದ, ಪ್ರೀತಿ ಮತ್ತು ಸಂಬಂಧಗಳ ಒಳಗೊಳ್ಳುವಿಕೆಯ ಕವಿತೆಯಾಗಿದೆ. ಠಾಕೂರರ ಬಹುತೇಕ ನಾಟಕಗಳು ಬೌದ್ಧಧರ್ಮದ ಚಿಂತನೆಗೆ ಮನ್ನಣೆಯನ್ನು ನೀಡಿವೆ. ಜಾತಿ, ಅಸ್ಪೃಶ್ಯತೆ ಇಂತಹ ಗಂಭೀರ ಸಮಸ್ಯೆಯನ್ನು ಬಹುತೇಕ ಸ್ತ್ರೀಪಾತ್ರಗಳ ಮೂಲಕ ಬೌದ್ಧಧರ್ಮವನ್ನು ಮುಖಾಮುಖಿಗೊಳಿಸಿ ಸಮಾನತೆಯ ಸಂದೇಶವನ್ನು ಸಾರುತ್ತಾರೆ. ಸಂಪ್ರದಾಯ, ಧರ್ಮಗಳ ಸಂಘರ್ಷಗಳ ನಡುವೆ ಠಾಕೂರರ

ಸರಳವಾದ ನಿರೂಪಣೆಗಳು ಓದುಗನಲ್ಲಿ ಸ್ಪಷ್ಟತೆಯನ್ನು ಪಡೆಯಲು ಸಾಧ್ಯವಾಗುತ್ತದೆ. ಇಂತಹ ಸಾಮಾಜಿಕ ಸಮಸ್ಯೆಗಳನ್ನ ಅರ್ಥೈಸಿಕೊಳ್ಳಲು ಓದುಗನನ್ನು ವೈಚಾರಿಕವಾಗಿ ಠಾಕೂರರು ಗಟ್ಟಿಗೊಳಿಸುತ್ತಾರೆ.

**ಪರಾಮರ್ಶನ ಗ್ರಂಥಗಳು:**


1. ಶಂಕರರಾವ್ ಚ.ನ., (2015), ಭಾರತೀಯ ಸಮಾಜ, ಮಂಗಳೂರು: ಜೈ ಭಾರತ ಪ್ರಕಾಶನ.
2. ಅಹೋಬಲ ಶಂಕರ, (1966), ನರ್ತಕಿಯ ಪೂಜೆ (ಅನು.), ಮೈಸೂರು: ಕಾವ್ಯ ಪ್ರಕಾಶನ.
3. ಚೆನ್ನಕೇಶವ ಜಿ., (2022), ರಥಯಾತ್ರೆ (ಅನು.), ಬೆಂಗಳೂರು: ಥಿಯೇಟರ್ ತತ್ಕಾಲ್ ಬುಕ್ಸ್.
4. ಶ್ರೀನಿವಾಸ ವಿ. ಸುತ್ರಾವೆ, (2013), ವಿಸರ್ಜನಾ (ಅನು.), ಧಾರವಾಡ: ಚಂದ್ರನಾಥ ಪ್ರಕಾಶನ.
5. ಶ್ರೀನಿವಾಸ ವಿ. ಸುತ್ರಾವೆ, (1973), ಚಾಂಡಲಿಕಾ (ಅನು.), ನವದೆಹಲಿ: ಸಾಹಿತ್ಯ ಅಕಾಡೆಮಿ.
6. ಪಶುಪತಿ ರೆಡ್ಡಿ, (1963), ಮಾಲಿನಿ (ಅನು.), ಬೆಂಗಳೂರು: ಕರ್ನಾಟಕ ಸಾಹಿತ್ಯ ಸಹಕಾರಿ ಸಂಘ.